## ದಿನಾಂಕ: 16.10.2021 ರಂದು ವಾರ್ಡ್ ಸಂಖ್ಯೆ 184 ಉತ್ತರಹಳ್ಳಿ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು.

**ಹಾಜರಿದ್ದ ಅಧಿಕಾರಿಗಳು:-**

1. ಶ್ರೀ ಡಿ.ಸುಂದರಯ್ಯ– ವಾರ್ಡ್ ಸಮಿತಿ ನೋಡಲ್ ಅಧಿಕಾರಿ
2. ಶ್ರೀ ವೆಂಕಟರಮಣ.ಕೆ.ವಿ – ಸಹಾಯಕ ಅಭಿಯಂತರರು ಮತ್ತು ಸಂಚಾಲಕರು (ವಾರ್ಡ್ 184 ಉತ್ತರಹಳ್ಳಿ)
3. ಶ್ರೀ ನರಸಪ್ಪ – ತೋಟಗಾರಿಕಾ ಸಹಾಯಕರು, ಬೊಮ್ಮನಹಳ್ಳಿ
4. ಡಾ// ದೀಕ್ಷಿತ – ಕೋವಿಡ್–19 ಆರೋಗ್ಯ ವೈದ್ಯಾಧಿಕಾರಿಗಳು, ಬೆಂಗಳೂರು ದಕ್ಷಿಣ ವಿಭಾಗ
5. ಶ್ರೀ ವೆಂಕಟೇಶ್.ಕೆ – ಮೇಲ್ವಿಚಾರಕರು, ಘನತ್ಯಾಜ್ಯ ನಿರ್ವಹಣೆ
6. ಶ್ರೀ ಮೋಸಿಸ್ – ಮೇಲ್ವಿಚಾರಕರು, ಘನತ್ಯಾಜ್ಯ ನಿರ್ವಹಣೆ
7. ಶ್ರೀ ರವೀಂದ್ರ – ಮೇಲ್ವಿಚಾರಕರು, ಘನತ್ಯಾಜ್ಯ ನಿರ್ವಹಣೆ

**ಹಾಜರಿದ್ದ ಸಮಿತಿ ಸದಸ್ಯರು:-**

1. ಶ್ರೀ ಹನುಮಂತಯ್ಯ – ನಿಕಟಪೂರ್ವ ನಗರ ಪಾಲಿಕೆ ಸದಸ್ಯರು, ಉತ್ತರಹಳ್ಳಿ ವಾರ್ಡ್ ಸಂಖ್ಯೆ 184
2. ಶ್ರೀ ಮೃತ್ಯುಂಜಯ.ಎಂ.ಎಸ್ – ಹನುಮಹಿಲ್ಸ್ ಬಡಾವಣೆRWA
3. ಶ್ರೀ ಅರುಣ್ – ಎ.ಜಿ.ಎಸ್ ಬಡಾವಣೆ RWA
4. ಶ್ರೀ ಅಮರ್.ಎಂ.ಆರ್ – ಎ.ಜಿ.ಎಸ್ ಬಡಾವಣೆ RWA
5. ಶ್ರೀ ಎಸ್.ಕೆ.ಸುದೀಂದ್ರ – ಪೂರ್ಣಪ್ರಜ್ಞಾಲೇಔಟ್ ಬಡಾವಣೆ RWA
6. ಶ್ರೀ ರಾಘವೇಂದ್ರ – ಜಯನಗರ ಹೌಸಿಂಗ್ ಬಡಾವಣೆ RWA
7. ಶ್ರೀ ಪಿಯೂಷ್ – ಹ್ಯಾಪಿ ವ್ಯಾಲಿ ಬಡಾವಣೆ RWA

ಮೇಲೆ ಹಾಜರಿದ್ದ ಸಮಿತಿ ಸದಸ್ಯರ ಹಾಗೂ ಅಧಿಕಾರಿಗಳ ಸಮ್ಮುಖದಲ್ಲಿ ವಾರ್ಡ್ ಸಮಿತಿ ನೋಡಲ್ ಅಧಿಕಾರಿಯಾದ ಶ್ರೀ ಡಿ.ಸುಂದರಯ್ಯ ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು, ಸದಸ್ಯರ ಮುಖ ಪರಿಚಯದೊಂದಿಗೆ ವಿವರಿಸುತ್ತಾ, ಹಾಜರಿದ್ದ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ಸದರಿ ಸಭೆಯಲ್ಲಿ ಈ ಕೆಳಕಂಡಂತೆ ವಿವಿಧ ವಿಷಯಗಳ ಬಗ್ಗೆ ವಾರ್ಡ್ ಸಮಿತಿಯು ವಿವರವಾಗಿ ಚರ್ಚಿಸಿದಂತೆ ಮುಂದಿನ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿ / ಇಲಾಖೆಗಳಿಗೆ ಸ್ರಚಿಸಲಾಗಿರುತ್ತದೆ.

1. **ಬೆಂಗಳೂರು ನೀರು ಮತ್ತು ಒಳಚರಂಡಿ ಇಲಾಖೆಗೆ ಸಂಬಂಧಪಟ್ಟಂತೆ**

- ಹೆಚ್.ಎಂ.ಎಸ್ ಬಡಾವಣೆಯಲ್ಲಿ ಸಾರ್ವಜನಿಕರು ಕಾವೇರಿ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಲು 60 ಕಡತಗಳನ್ನು ಸಲ್ಲಿಸಿದ್ದು, ಇದುವರೆಗೂ ಕ್ರಮ ಕೈಗೊಂಡಿರುವುದಿಲ್ಲ ಎಂದು ತಿಳಿಸಿರುತ್ತಾರೆ.
- ಎ.ಜಿ.ಎಸ್ ಬಡಾವಣೆಯಲ್ಲಿನ ರಸ್ತೆಗಳಲ್ಲಿ ಒಳಚರಂಡಿ ನೀರು ರಸ್ತೆಯಲ್ಲಿ ಉಕ್ಕಿ ಹರಿಯುತ್ತಿದ್ದು, ಅದನ್ನು ಸರಿಪಡಿಸಲು ಕೋರಿರುತ್ತಾರೆ.

ಈ ಬಗ್ಗೆ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಂಗಳೂರು ಕುಡಿಯುವ ನೀರು ಮತ್ತು ಒಳಚರಂಡಿ ಮಂಡಳಿ ರವರಿಗೆ ಸೂಚಿಸಿರುತ್ತಾರೆ.

2. **ಬೆಸ್ಕಾಂ ಇಲಾಖೆಗೆ ಸಂಬಂಧಪಟ್ಟಂತೆ.**

- ಎ.ಜಿ.ಎಸ್ ಬಡಾವಣೆಯಲ್ಲಿ ವಿದ್ಯುತ್ ಕಂಬ ದುರಸ್ಥಿಗೊಂಡಿದ್ದು, ಹೊಸದಾಗಿ ವಿದ್ಯುತ್ ಕಂಬವನ್ನು ಅಳವಡಿಸಲು ಕೋರಿರುತ್ತಾರೆ.
- ಉತ್ತರಹಳ್ಳಿ ವಾರ್ಡ್ ವ್ಯಾಪ್ತಿಯಲ್ಲಿ ಕೇಬಲ್ ಅಳವಡಿಸಲು ಅಗೆದಿರುವ ರಸ್ತೆಗೆ ಮರು ಡಾಂಬರೀಕರಣ ಮಾಡಲು ಕೋರಿರುತ್ತಾರೆ.
- ಹ್ಯಾಪಿ ವ್ಯಾಲಿ ಬಡಾವಣೆಯಲ್ಲಿ ವಿದ್ಯುತ್ ಸರಬರಾಜು ಅಡಚಣೆಯಾಗುತ್ತಿದ್ದು, ಸರಿಪಡಿಸಲು ಕೋರಿರುತ್ತಾರೆ.
- ಉತ್ತರಹಳ್ಳಿ ಮಾರ್ಥಾಸ್ ರಸ್ತೆಯ ಬದಿಯಲ್ಲಿರುವ ವಿದ್ಯುತ್ ಕಂಬವನ್ನು ಸ್ಥಳಾಂತರಿಸಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಇಲಾಖೆ ರವರಿಗೆ ಸೂಚಿಸಿರುತ್ತಾರೆ.

3. **ಕೋವಿಡ್-19ಗೆ ಸಂಬಂಧಪಟ್ಟಂತೆ.**

- ಎ.ಜಿ.ಎಸ್ ಬಡಾವಣೆಯಲ್ಲಿ ಕೋವಿಡ್ ಲಸಿಕೆ ಹಾಕುವ ಸಂಬಂಧ ಮನೆ ಮನೆಗಳಿಗೆ ಸರ್ವೆ ಮಾಡಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಹಾಯಕ ಕಾರ್ಯಪಾಲಕ ಬೀದಿ ದೀಪ ರವರಿಗೆ ಸೂಚಿಸಿರುತ್ತಾರೆ.

4. **ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟಂತೆ.**

- ಪೂರ್ಣಪ್ರಜ್ಞಾ ಬಡಾವಣೆ ಮತ್ತು ಹ್ಯಾಪಿವ್ಯಾಲಿ ಬಡಾವಣೆಯಲ್ಲಿ ಬರುವ ಪಾರ್ಕ್‌ಗಳನ್ನು ನಿರ್ವಹಣೆ ಮಾಡಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಂಬಂಧಪಟ್ಟ ತೋಟಗಾರಿಕೆ ಅಧೀಕ್ಷಕರು ರವರಿಗೆ ಸೂಚಿಸಿರುತ್ತಾರೆ.

5. **ಸ.ಕಾ.ನಿ.ಅ ಉತ್ತರಹಳ್ಳಿ ಉಪವಿಭಾಗಕ್ಕೆ ಸಂಬಂಧಪಟ್ಟಂತೆ**

- ಹ್ಯಾಪಿವ್ಯಾಲಿ ಬಡಾವಣೆಯ ರಸ್ತೆ ಬದಿಯ ಚರಂಡಿಗಳಲ್ಲಿನ ಹೂಳನ್ನು ತೆರವುಗೊಳಿಸಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಹಾಯಕ ಕಾರ್ಯಪಾಲಕ ಅಭಿಯಂತರರು ಉತ್ತರಹಳ್ಳಿ ಉಪವಿಭಾಗ ರವರಿಗೆ ಸೂಚಿಸಿರುತ್ತಾರೆ

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರಾದ ಶ್ರೀ ಡಿ.ಸುಂದರಯ್ಯ ರವರು ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಶ್ರೀ ಡಿ.ಸುಂದರಯ್ಯ
ನೋಡಲ್ ಅಧಿಕಾರಿ ಹಾಗೂ ಸ.ಕಾ.ನಿ.ಅ
ಅಂಜನಾಪುರ ಉಪವಿಭಾಗ

ಶ್ರೀ ವೆಂಕಟರಮಣ.ಕೆ.ವಿ
ಸಂಚಾಲಕರು ಹಾಗೂ ಸ.ಅ-184